ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಸಿ3/ವಾಹನ ವಿಲೇವಾರಿ/18/2014–15 ದಿನಾಂಕ: 01–06–2016

## ಬಹಿರಂಗ ಹರಾಜು ಪ್ರಕಟಣೆ ಸಂಖ್ಯೆ: 1/2016–17

### ಕಛೇರಿಯ ಪ್ರಕಟಣಾ ಫಲಕಕ್ಕೆ

ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಸೇರಿದ ಕೆಳಕಂಡ 4 ವಾಹನಗಳನ್ನು "ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ" ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಿದೆ. ಅವುಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ. ಸಂ | ಹರಾಜು ಮಾಡಲು ಉದ್ದೇಶಿಸಿರುವ ವಾಹನಗಳ ವಿವರಗಳು | ಪರಿಮಾಣ | ನಿಗದಿಪಡಿಸಿದ ಮೌಲ್ಯ | ಹರಾಜಿನಲ್ಲಿ ಭಾಗವಹಿಸುವವರು ಠೇವಣಿ ಮಾಡಬೇಕಾದ ಮೊತ್ತ (ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ಮಾತ್ರ) ರೂ ಗಳಲ್ಲಿ | ಖಾಲಿ ನಮೂನೆಯ ಬೆಲೆ (ಹಿಂದಿರುಗಿಸಲಾಗುವುದಿಲ್ಲ) ನಗದು ರೂಪದಲ್ಲಿ ಮಾತ್ರ ರೂ.ಗಳಲ್ಲಿ | ಖಾಲಿ ನಮೂನೆಗಳನ್ನು ನೀಡಲಾಗುವ ದಿನಾಂಕ | ಮೊಹರಾದ ಲಕೋಟೆಗಳನ್ನು ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ಬಹಿರಂಗ ಹರಾಜು ಮಾಡಲಾಗುವ ದಿನಾಂಕ ಹಾಗೂ ಸಮಯ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | KA.01.G.3038 ಟೆಂಪೋ ಟ್ರಾಕ್ಸ್, | 1 | ರಹಸ್ಯವಾಗಿರಿಸಿದೆ. | ರೂ.1000/– | ರೂ.100/– | 04.06.2016ರಿಂದ 09.06.2016ರವರೆಗೆ | 18.06.2016 ಸಂಜೆ 4.30 | 20.06.2016 ಬೆಳಿಗ್ಗೆ 11.30 |
| 2 | KA.38 G 105 ಟೆಂಪೋ ಟ್ರಾಕ್ಸ್, | 1 | ರಹಸ್ಯವಾಗಿರಿಸಿದೆ. | ರೂ.1000/– | ರೂ.100/– | 04.06.2016ರಿಂದ 09.06.2016ರವರೆಗೆ | 18.06.2016 ಸಂಜೆ 4.30 | 20.06.2016 ಬೆಳಿಗ್ಗೆ 11.30 |
| 3 | KA.25. G 236 ಟೆಂಪೋ ಟ್ರಾಕ್ಸ್ | 1 | ರಹಸ್ಯವಾಗಿರಿಸಿದೆ. | ರೂ.1000/– | ರೂ.100/– | 04.06.2016ರಿಂದ 09.06.2016ರವರೆಗೆ | 18.06.2016 ಸಂಜೆ 4.30 | 20.06.2016 ಬೆಳಿಗ್ಗೆ 11.30 |
| 4 | KA.01. G.2458 ಟಾಟಾ ಸುಮೋ | 1 | ರಹಸ್ಯವಾಗಿರಿಸಿದೆ. | ರೂ.1000/– | ರೂ.100/– | 04.06.2016ರಿಂದ 09.06.2016ರವರೆಗೆ | 18.06.2016 ಸಂಜೆ 4.30 | 20.06.2016 ಬೆಳಿಗ್ಗೆ 11.30 |

### ***ಷರತ್ತು ಮತ್ತು ನಿಬಂಧನೆಗಳು***

1. ಒಬ್ಬ ಹರಾಜುದಾರರು ಒಂದು ಮತ್ತು ಅದಕ್ಕಿಂತ ಹೆಚ್ಚಿನ (ಗರಿಷ್ಠ 4) ವಾಹನ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಈ ಕಛೇರಿಯಿಂದ ನಿಗದಿಪಡಿಸಿರುವ ಪ್ರತಿ ವಾಹನಕ್ಕೆ ಒಂದು ನಮೂನೆಗಾಗಿ ರೂ.100/– ರಂತೆ ನಗದು ರೂಪದಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು ಇವರ ಕಛೇರಿಯಲ್ಲಿ ಸಂದಾಯ ಮಾಡಿ ನಿಗದಿತ ದಿನಾಂಕದಿಂದ ಪಡೆಯಬಹುದಾಗಿದೆ. ಈ ಹಣವನ್ನು ಹಿಂದಿರುಗಿಸುವುದಿಲ್ಲ ಹಾಗೂ ನಮೂನೆಗಳನ್ನು ಅಂಚೆ ಮೂಲಕ ಕಳುಹಿಸುವುದಿಲ್ಲ.

2. ಭರ್ತಿ ಮಾಡಿದ ನಮೂನೆಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ಪ್ರತಿ ವಾಹನಕ್ಕೆ ರೂ 1000/– ರಂತೆ ಠೇವಣಿಯನ್ನು (ಬ್ಯಾಂಕ್ ಹುಂಡಿಯ ಮೂಲಕ) ನಿಗದಿಪಡಿಸಿರುವ ಕೊನೆಯ ದಿನಾಂಕ ಹಾಗೂ ಸಮಯದೊಳಗೆ ರಾಜ್ಯ ಯೋಜನಾ ಕಛೇರಿಗೆ ತಲುಪಿಸತಕ್ಕದ್ದು. ಡಿ.ಡಿ.ಯನ್ನು ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ, ಬೆಂಗಳೂರು ಇವರ ಹೆಸರಿನಲ್ಲಿ ಪಡೆಯತಕ್ಕದ್ದು.

***ಪು.ತಿ.ನೋ...***

3. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಸಲು ನಿಗದಿಪಡಿಸಿರುವ ದಿನಾಂಕದಂದು ಬೆಳಿಗ್ಗೆ 11.00 ಘಂಟೆಯ ಒಳಗೆ ನಿಗದಿತ ಠೇವಣಿಯನ್ನು (ಕಾಲಂ 5 ರಂತೆ) ಸಂದಾಯ ಮಾಡತಕ್ಕದ್ದು ಹಾಗೂ ಠೇವಣಿ ಸಂದಾಯ ಮಾಡಿದ ಹೆಸರಿನ ವ್ಯಕ್ತಿಯು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು.

4. ದಿನಾಂಕ 20.06.2016 ರಂದು 11.30 ಗಂಟೆಗೆ ಈ ಕಛೇರಿಯ 3ನೇ ಮಹಡಿಯ ಸಭಾಂಗಣದಲ್ಲಿ ನಾಲ್ಕು ವಾಹನಗಳ ಬಹಿರಂಗ ಹರಾಜನ್ನು ನಡೆಸಲಾಗುವುದು. ಹರಾಜಿನಲ್ಲಿ ಒಂದು ವಾಹನವನ್ನು ಹೆಚ್ಚು ಮೊತ್ತಕ್ಕೆ ಹರಾಜು ಕೂಗಿದವರನ್ನು ಹರಾಜಿನಲ್ಲಿ ಯಶಸ್ವಿ ಹರಾಜುದಾರರೆಂದು ಪರಿಗಣಿಸಲಾಗುವುದು.

5. ಬಹಿರಂಗ ಹರಾಜಿನ ದಿನದಂದೇ, ಆಯಾ ವಾಹನದ ಹರಾಜಿನ ನಂತರ, ಆ ಸ್ಥಳದಲ್ಲಿಯೆ ಭರ್ತಿಮಾಡಿದ ಮುಚ್ಚಿದ ಲಕೋಟೆಗಳಲ್ಲಿನ ನಮೂನೆಗಳನ್ನು ತೆರೆಯಲಾಗುವುದು. ನಮೂನೆಯಲ್ಲಿ ಯಾವ ಹರಾಜುದಾರರು ಆ ವಾಹನಕ್ಕೆ ಹೆಚ್ಚು ಮೊತ್ತವನ್ನು ನಮೂದಿಸಿರುತ್ತಾರೋ ಅವರನ್ನು ಆಯಾ ವಾಹನದ ಯಶಸ್ವಿ ಹರಾಜುದಾರರೆಂದು ಪರಿಗಣಿಸಲಾಗುವುದು. ಹರಾಜು ಕೂಗಿದ ಮೊತ್ತ ಹಾಗೂ ನಿಗದಿಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿರುವ ಮೊತ್ತದ ಪೈಕಿ ಯಾವುದು ಹೆಚ್ಚು ಇರುವುದೋ ಆ ಮೊಬಲಗನ್ನು ಆಯಾ ವಾಹನದ ಹರಾಜಿನ ಮೊತ್ತವೆಂದು ಪರಿಗಣಿಸಲಾಗುವುದು.

6. ಕಾಲಂ 5 ರಂತೆ ಆಗುವ ಯಶಸ್ವಿ ಹರಾಜುದಾರರು ಸ್ಥಳದಲ್ಲಿಯೇ ವಾಹನದ ಬಿಡ್ಡಿನ ಮೊತ್ತದ 50% ಮೊಬಲಗನ್ನು ನಗದು ರೂಪದಲ್ಲಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾದ ಹರಾಜುದಾರರು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯನ್ನು ಪಡೆದ ನಂತರ ವಿಳಂಬ ಮಾಡದೆ ಉಳಿದ 50% ಹಣವನ್ನು 2 ದಿನಗಳ ಅವಧಿಯಲ್ಲಿ ಹರಾಜುದಾರರು ಚಾಲ್ತಿಯಲ್ಲಿರುವ ತೆರಿಗೆಗಳನ್ನು ನಿಯಮಾನುಸಾರ ಪಾವತಿಸಿ, ಈ ಕಛೇರಿಗೆ ದಾಖಲೆಯನ್ನು ಒದಗಿಸಿ ಹರಾಜು ಮಾಡಲಾದ ವಾಹನವನ್ನು ತೆಗೆದುಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಹರಾಜುದಾರರು ಪಾವತಿಸಿದ ಪೂರ್ಣ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಅದುವರೆಗೆ ನಡೆದ ಬಹಿರಂಗ ಹರಾಜು ಪ್ರಕ್ರಿಯೆಯನ್ನು ರದ್ದುಗೊಳಿಸಿ ಮರು ಬಹಿರಂಗ ಹರಾಜಿನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

7. ಹರಾಜುದಾರರು ರಾಜ್ಯ ಯೋಜನಾ ಕಛೇರಿಗೆ ತುಂಬಿದ ಠೇವಣಿ ಹಣಕ್ಕೆ ಬಡ್ಡಿಯನ್ನು ನೀಡುವುದಿಲ್ಲ.

8. ಆಸಕ್ತಿಯುಳ್ಳ ಸಾರ್ವಜನಿಕರು ವಾಹನವನ್ನು ಕಛೇರಿಯ ವೇಳೆಯಲ್ಲಿ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿಯ ಆವರಣದಲ್ಲಿ ನಿಲುಗಡೆ ಮಾಡಿರುವ ಸ್ಥಳದಲ್ಲಿ ಪರಿಶೀಲಿಸಬಹುದು.

9. ಮೇಲೆ ತಿಳಿಸಿರುವ ದಿನಾಂಕಗಳಂದು ಸಾರ್ವಜನಿಕ ರಜೆ ಆಗಿದ್ದಲ್ಲಿ ಮುಂದಿನ ಕೆಲಸದ ದಿನವು ಅನ್ವಯವಾಗುವುದು.

10. ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಈ ಬಹಿರಂಗ ಹರಾಜು ಒಳಪಟ್ಟಿರುತ್ತದೆ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

1. ಸೂಚನಾ ಫಲಕಕ್ಕೆ.

**ಪ್ರತಿಗಳು:**

2. ನಿರ್ದೇಶಕರು (ಕಾರ್ಯಕ್ರಮ) ಹಾಗೂ ಸಹನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆಗೆ.
3. ಮುಖ್ಯ ಲೆಕ್ಕಾಧಿಕಾರಿಕಾರಿಗಳು, ಲೆಕ್ಕ ಪತ್ರ ಶಾಖೆ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ.ಇ, ಬೆಂಗಳೂರು ಇವರಿಗೆ ಪ್ರತಿ ಕಳುಹಿಸುತ್ತಾ, ಸರ್ವ ಶಿಕ್ಷಣ ಅಭಿಯಾನದ ವೆಬ್‌ಸೈಟ್‌ನಲ್ಲಿ ಪ್ರಕಟಣೆಗೊಳಿಸುವಂತೆ ಸೂಚಿಸಿದೆ.
5. ಕಛೇರಿ ಪ್ರತಿ.

F:\Admin Sec\Rekha\Devaraj\Vehicle\Vahana Vilevari-18 2014-15.doc